# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದಳಸನೂರು ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು – ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/121/ಗ್ರಾಪಂಕಾ/2013, ದಿನಾಂಕ: 22-04-2013.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪ.ಸಂಖ್ಯೆ: LOK/INQ/14-A/202/2013/ARE-10, ದಿನಾಂಕ: 31-03-2018.
3. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/210/ಗ್ರಾಪಂಕಾ/2018, ದಿನಾಂಕ: 23-04-2018.
4. ಶ್ರೀ ಕೆ. ಶ್ರೀನಿವಾಸ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 14-05-2018.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದಳಸನೂರು ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-A ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11(3)ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

ಆಪಾದಿತ ಸರ್ಕಾರಿ ನೌಕರರಾದ ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದಳಸನೂರು ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ನೀವು ಈ ಕೆಳಕಂಡಂತೆ ಕರ್ತವ್ಯ ಲೋಪವೆಸಗಿರುತ್ತೀರಿ;

ಅ) ಆಪಾದಿತ ಸರ್ಕಾರಿ ನೌಕರರಾದ ನೀವು ಕೊನೇಟಿತಿಮ್ಮನಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಶೌಚಾಲಯವನ್ನು ಮೊದಲೇ ನಿರ್ಮಿಸಿದ್ದರೂ ಸಹ, ಪುನ: ಪಂಚಾಯಿತಿ ವತಿಯಿಂದ ಶೌಚಾಲಯ ನಿರ್ಮಿಸಿರುವುದಾಗಿ 20,000/- ರೂ. ಹಣವನ್ನು ಶ್ರೀ ಕೆ.ಪಿ. ನಾಗೇಶ್ ಬಿನ್ ಪಾಪಣ್ಣ, ತಾಲ್ಲೂಕು ಪಂಚಾಯಿತಿ ಸದಸ್ಯರು, ಕಾಡುದೇವಂಡ್ಲಹಳ್ಳಿ ಗ್ರಾಮ, ಗಂಡ್ಲಹಳ್ಳಿ ಅಂಚೆ, ಶ್ರೀನಿವಾಸಪುರ ತಾಲ್ಲೂಕು ಇವರಿಗೆ ಪಾವತಿಸಿರುತ್ತೀರಿ.

ಆ) ಆಪಾದಿತ ಸರ್ಕಾರಿ ನೌಕರರಾದ ನೀವು ಶೌಚಾಲಯದ ಕಾಮಗಾರಿ ಮಾಡದೆ, ಶೌಚಾಲಯ ನಿರ್ಮಿಸಿದೆ ಎಂದು ಸುಳ್ಳು ದಾಖಲೆ ಸೃಷ್ಟಿಸಿರುತ್ತೀರಿ.

ಇ) ಆಪಾದಿತ ಸರ್ಕಾರಿ ನೌಕರರಾದ ನೀವು ಶೌಚಾಲಯದ ಕಾಮಗಾರಿ ಮಾಡದೆ, ಶೌಚಾಲಯ ನಿರ್ಮಿಸಿದೆ ಎಂದು ಸುಳ್ಳು ದಾಖಲೆ ಸೃಷ್ಟಿಸಿ, 20,000/- ರೂ. ಹಣವನ್ನು ಸರ್ಕಾರಕ್ಕೆ ನಷ್ಟ ಉಂಟುಮಾಡಲು ಕಾರಣಕರ್ತರಾಗಿರುತ್ತೀರಿ.

ಈ) ಆಪಾದಿತ ಸರ್ಕಾರಿ ನೌಕರರಾದ ನೀವು ಶೌಚಾಲಯ ನಿರ್ಮಿಸಿದ ಬಗ್ಗೆ ಯಾವುದ್ದೇ ದಾಖಲಾತಿಗಳನ್ನು ಕಾಪಾಡಿಕೊಳ್ಳದೇ ಮತ್ತು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುವುದಿಲ್ಲ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

ವಿಚಾರಣಾಧಿಕಾರಿಯವರು, ದಿನಾಂಕ:27.03.2018 ರಂದು ಮಾನ್ಯ ಉಪಲೋಕಾಯುಕ್ತರಿಗೆ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯ ಅನುಸಾರ ಶ್ರೀ. ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದಳಸನೂರು ಗ್ರಾಮ ಪಂಚಾಯಿತಿ ರವರ ವಿರುದ್ಧದ ಆರೋಪವು ಸಾಬೀತಾಗಿರುವುದೆಂದು ವರದಿ ಸಲ್ಲಿಸಿರುತ್ತಾರೆ.

ಮೊದಲಿಗೆ ನಿಯಮಾನುಸಾರ ಆರೋಪಿತ ನೌಕರರಿಗೆ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟಿಸನ್ನು ದಿನಾಂಕ: 23-04-2018 ರಂದು ನೀಡಲಾಗಿತ್ತು.

ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದಳಸನೂರು ಗ್ರಾಮ ಪಂಚಾಯಿತಿ ರವರು ಈ ಕೆಳಕಂಡಂತೆ ಕಾರಣ ಕೇಳಿ ನೋಟಿಸ್‌ಗೆ ಉತ್ತರ ನೀಡಿರುತ್ತಾರೆ.

- ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆದ ನಾನು ದಳಸನೂರು ಗ್ರಾಮ ಪಂಚಾಯಿತಿಯಲ್ಲಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಅಂದಿನ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀ ಕೆ.ಪಿ. ನಾಗೇಶ್ ರವರಿಗೆ ಸಹಾಯ ಮಾಡಿ ಅವರು ಕೋನೇಟಿತಿಮ್ಮನಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡದೇ ಇದ್ದರೂ ಸಹ ಹಣವನ್ನು ಶೌಚಾಲಯದ ನಿರ್ಮಾಣಕ್ಕೆ ಅವರ ಹೆಸರಿಗೆ ರೂ. 20,000/-ಗಳನ್ನು ಬಿಡುಗಡೆ ಮಾಡಿರುವ ಬಗ್ಗೆ ನನ್ನ ಮೇಲೆ ಆರೋಪವನ್ನು ಮಾಡಿರುತ್ತಾರೆ. ಈ ಮೇಲ್ಕಂಡ ವಿಷಯದ ಬಗ್ಗೆ ಮಾರುತಿ ರೆಡ್ಡಿ ಎಂಬುವರು ಲೋಕಾಯುಕ್ತರವರಿಗೆ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀ ಕೆ.ಪಿ. ನಾಗೇಶ್, ಎಂಬುವರ ಮೇಲೆ ದೂರನ್ನು ದಾಖಲಿಸಿರುತ್ತಾರೆ. ಅದರಂತೆ "ಲೋಕಾಯುಕ್ತ" ಸಂಸ್ಥೆಯು ತನಿಖೆ ಮಾಡಿ ತದನಂತರ ಶ್ರೀ ಕೆ.ಪಿ. ನಾಗೇಶ್‌ರವರ ಮೇಲೆ ಯಾವುದೇ ರಿತಿಯ ಕ್ರಮ ತೆಗೆದುಕೊಳ್ಳದೇ ನಾನು ನಿವೃತ್ತಿ ಹೊಂದಿದ ದಿನಾಂಕದಂದು ನನಗೆ ಲೋಕಾಯುಕ್ತ ಸಂಸ್ಥೆಯು ನೋಟೀಸ್ ನೀಡಿರುತ್ತಾರೆ. ನಂತರ ನಾನು ಕೇಸು ನಂ. ಲೋಕ್/ವಿಚಾರಣೆ/14-ಎ/202/2013/ಎಆರ್‌ಇ-10 ರಲ್ಲಿ ವಿಚಾರಣೆ ನಡೆದಿದ್ದು, ನಂತರ ನನ್ನ ಮೇಲೆ ಯಾವುದೇ ರೀತಿಯ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ ಸಹ ನನ್ನ ನಿವೃತ್ತಿ ವೇತನದ ಶೇ.10ನ್ನು 10 ವರ್ಷಗಳ ಅವಧಿಯವರೆಗೆ ಕಡಿತಗಳಿಸಬಹುದೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಈ ಮೇಲ್ಕಂಡ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದು ಏನೆಂದರೆ ಸರ್ಕಾರಿ ನೌಕರನಾದ ನಾನು ಯಾವುದೇ ರೀತಿಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳದೇ ಇದ್ದರೂ ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀ ಕೆ.ಪಿ. ನಾಗೇಶ್, ರವರ ಹೆಸರಿಗೆ ರೂ.20,000/-ನ್ನು ಕೋನೇಟಿತಿಮ್ಮನಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಶೌಚಾಲಯ ನಿರ್ಮಾಣಕ್ಕೆ ಹಣವನ್ನು ಬಿಡುಗಡೆ ಮಾಡದೇ ಇದ್ದರೂ ಸಹ, ನನ್ನ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ನನಗೆ ಸುಮಾರು ರೂ. 8,000/-ಗಳಷ್ಟು ನಿವೃತ್ತಿ ವೇತನವನ್ನು

ಪಡೆದುಕೊಳ್ಳುತ್ತಿದ್ದು, ಇದರಲ್ಲಿಯೇ ನಾನು ಮತ್ತು ನನ್ನ ಹೆಂಡತಿಯ ಜೀವನ ನಡೆಸಬೇಕಾಗಿರುತ್ತದೆ. ಒಂದು ವೇಳೆ ನನ್ನ ನಿವೃತ್ತಿ ವೇತನದ ಶೇ.10 ರಷ್ಟು ಕಡಿತಗೊಳಿಸಿದಲ್ಲಿ ನಮ್ಮ ಜೀವನ ನಡೆಸಲು ಕಷ್ಟಕರವಾಗುತ್ತದೆ. ಆದುದರಿಂದ ತಮ್ಮಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಮಾನ್ಯ ಲೋಕಾಯುಕ್ತ ಸಂಸ್ಥೆಯ ಆದೇಶವನ್ನು ತಿರಸ್ಕರಿಸಿ, ಆದೇಶವನ್ನು ಅನುಷ್ಠಾನಗೊಳಿಸಬಾರದೆಂದು ಕೋರಿರುತ್ತಾರೆ.

ಆಪಾದಿತ ನೌಕರರು ಎರಡನೇ ಕಾರಣ ಕೇಳುವ ನೋಟಿಸ್‌ನಲ್ಲಿ ಎತ್ತಿರುವ ಆಕ್ಷೇಪಣೆಗಳಿಗೆ ಸಂಬಂಧಪಟ್ಟಂತೆ ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿವೆ. ಆರೋಪಿತ ನೌಕರರು ನೀಡಿರುವ ಮನವಿಯಲ್ಲಿರುವ ವಿವರಣೆಯನ್ನು ಪರಿಶೀಲಿಸಲಾಗಿದೆ. ಈ ವಿವರಣೆಯನ್ನು ಸ್ಥಾಪಿತ ನಿಯಮಾವಳಿಗಳ ಪ್ರಕಾರ ಒಪ್ಪಲು ಸಾಧ್ಯವಿರುವುದಿಲ್ಲ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಪ್ರಮುಖವಾಗಿ ವರದಿಯ ಕಂಡಿಕೆಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

In the cross examination , DW1 has deposed that one Satish Kumar was his predecessor.He denies that with prior intimation to him, IO has inspected the work. He denies that the toilet under SSA Scheme was already existing in the School. He does not know that at that time one Nagesh was the Panchayat member. He denies that he has released Rs. 20,000/-towards the toilet already existing, in favour of said Nagesh. He denies that he has created the documents in respect of the toilet which was already existing and committed misconduct.

The Government Order No. GPK/CDP/5/PDO/CR-61/2011-12, Dated: 16.09.2017 Show that there was another departmental enquiry against the DGO. According to this GO, the said departmental enquiry is different than the Articles of charge framed in this departmental enquiry. In the said departmental enquiry, the DGO was exonerated from the charges. But that is not a ground to exonerate the DGO in this departmental enquiry.

The evidence of PWI and his report and the documents record show that the payment of Rs. 20,000/- was made towards the construction of toilet at Koneruthimmanahalli village school though the toilet was already existing.

Under Sarva Shikshana Adhiyana scheme, a toilet was already constructed in Koneruthimmanahalli Primary School. Again the DGO has shown that the toilet is constructed and made payment of Rs. 20,000/- in favour of Sri. K.P. Nagesh S/o Papanna, Taluk Panchayath member, Kadudevandahalli Village, Gandlahalli post, Srinivasapura Taluk though the toilets were not constructed. The DGO has created the documents as if the toilet is constructed. Without doing the toilet construction work, documents are created and caused loss of Rs. 20,000/- to the State Exchequer. DGO has not maintained any documents in the office in respect of construction of toilet and the said documents are not furnished before the I.O.

The copy of the bank statement Ex P 5 show that a sum of Rs. 20,000/- each was paid to Sri. K.P. Nagesh twice vide cheque Nos. 442247 and 442248. Copy of the cheque Ex P 6 show that another cheque of Rs. 14,959 was issued in favour of Sri. K.P. Nagesh S/o Papanna.

The oral and documentary evidence on record clearly reveals tht the DGO without doing the toilet work, has paid Rs. 20,000/- to Sri. K.P. Nagesh and caused loss of Rs. 20,000/- to the State Exchequer.

Thereby the DGO, being a Government/public servant has failed to maintain absoulte integrity besides devotion to duty and acted in a manner unbecoming of a Government servant as enumerated U/R 3(1) of Karnataka Civil Service (Conduct) Rules 1966. Hence, I proceed to answer point No. 1 in the Affirmative.

ಈ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರು ರವರು ದಿನಾಂಕ: 31.03.2018 ರಂದು ಮಾಡಿರುವ ಶಿಫಾರಸ್ಸಿನಲ್ಲಿ ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ಇವರಿಗೆ **"Penalty of withholding 10% of pension payable to the DGO-Shri K. Srinivas for a period of 10 years' and also, to recover a sum of Rs.20,000/- from the pension payable"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಸರ್ಕಾರವು ಎಲ್ಲಾ ಅಂಶಗಳನ್ನು ಪರಿಶೀಲಿಸಿದ್ದು, ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲ ಹಾಗೂ ಪರಿಗಣಿಸುವಂತಹ ಯಾವುದೇ ಅಂಶಗಳು ಆಧಾರಗಳು ಕಂಡು ಬರುವುದಿಲ್ಲ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಸದರಿ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರ ನಿರ್ಣಯವನ್ನು ಅಂಗೀಕರಿಸಲು ಮತ್ತು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ **"Penalty of withholding 10% of pension payable to the DGO-Shri K. Srinivas for a period of 10 years' and also, to recover a sum of Rs.20,000/- from the pension payable"** ದಂಡನೆ ವಿಧಿಸಲು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/210/ಗ್ರಾಪಂಕಾ/2018,**
**ಬೆಂಗಳೂರು, ದಿನಾಂಕ: 16-07-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದಳಸನೂರು ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರಿಗೆ **"Penalty of withholding 10% of pension payable to the DGO-Shri K. Srinivas for a period of 10 years' and also, to recover a sum of Rs.20,000/- from the pension payable"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ-2, ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೋಲಾರ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಶ್ರೀನಿವಾಸಪುರ, ಕೋಲಾರ ಜಿಲ್ಲೆ.
7. ಶ್ರೀ ಕೆ. ಶ್ರೀನಿವಾಸ ಬಿನ್ ಕೃಷ್ಣೇಗೌಡ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದಳಸನೂರು ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.